ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಬುಧವಾರ, ದಿನಾಂಕ ೧ನೇ ಜೂನ್ ೧೯೮೮, ಜ್ಯೇಷ್ಠ ೧೧, ೧೯೧೦, ಶಕ

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೦ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ಅವರು ಪೀಠವನ್ನಲಂಕರಿಸಿದರು.]

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಸ.ನಂ. ೫೭/೨ನ ಮಾಲೀಕರು ತಿಳಿಸಿದವರಿಗೆ ಮಾತ್ರ ಹಕ್ಕು ಪತ್ರ ನೀಡಿರುವುದು.

೨೧೦೪. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

(ಅ) ಅಗ್ರಹಾರ ದಾಸರಹಳ್ಳಿ ವೆಸ್ಟ್ ಆಫ್ ಕಾರ್ಡ್ ರೋಡ್ ಳನೇ ಸ್ಟೇಜ್ ಬೆಂಗಳೂರು ಸ. ನಂ. ೫೭/೨ ಲೇಔಟ್ ಚಾರ್ಟನ್ನು ಕಟ್ಟಲು ಡಿಮಾಂಡ್ ನೋಟೀಸನ್ನು ಜೂನ್ ೧೯೭೮ ರಲ್ಲಿ ಕಟ್ಟಿದ್ದು ನಿಜವೇ ?

(ಆ) ಮಾಲೀಕರು ತಿಳಿಸಿದ ಕೆಲವರಿಗೆ ಹಕ್ಕು ಪತ್ರಗಳನ್ನು ಕೊಟ್ಟಿರುವುದು ನಿಜವೇ ?

(ಇ) ಕೊಟ್ಟಿದ್ದರೆ, ಬೇರೆಯವರಿಗೆ ಏಕೆ ಹಕ್ಕು ಪತ್ರಗಳನ್ನು ಕೊಡಲಿಲ್ಲ ಈ ರೀತಿಯ ತಾರತಮ್ಯವೇಕೆ ?

(ಈ) ಉಳಿದಿರುವ ಹಕ್ಕುದಾರರಿಗೆ ಹಕ್ಕು ಪತ್ರಗಳನ್ನು ಇನ್ನು ತಡವಿಲ್ಲದೆ ಕೊಡುತ್ತೀರಾ ?

ಶ್ರೀ ಎಂ. ಪಿ. ಪ್ರಕಾಶ್ (ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಸಚಿವರು).—

(ಅ) ಹೌದು.

(ಆ) ಹೌದು.

(ಇ) ಬೇರೆಯವರಿಗೆ ಹಕ್ಕು ಪತ್ರಗಳನ್ನು ಅವರುಗಳು ಖರೀದಿ ಪತ್ರವನ್ನು ಹಾಜರುಪಡಿಸದೇ ಇರುವುದರಿಂದ ನೀಡಲಾಗಲಿಲ್ಲ.

(ಈ) ಉಚ್ಚ ನ್ಯಾಯಾಲಯದ ಹಲವಾರು ತೀರ್ಮಾನಗಳಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಮರಳಿ ವಹಿಸಿಕೊಡಲು ಅಧಿಕಾರವಿಲ್ಲವೆಂದು ತೀರ್ಮಾನಿಸಿದ್ದರಿಂದ ರೀಕನ್ವೆ ಮಾಡಿಸಿವುದನ್ನು ಸಿಲ್ಲಿಸಿರುವುದರಿಂದ ಹಕ್ಕು ಪತ್ರಗಳನ್ನು ಕೊಡಲು ಸಾಧ್ಯವಿಲ್ಲ.

ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಸನ್ಮಾನ್ಯ ಅಧ್ಯಕ್ಷರೇ ೨೭-೧೨-೧೯೭೪ ರಲ್ಲಿ ಈ ಸ್ವತ್ತನ್ನು ರೀಕನ್‌ವೇ ಮಾಡುವುದಕ್ಕೆ ಬಿ.ಡಿ.ಎ. ರವರು ಒಪ್ಪಿಕೊಂಡಿದ್ದಾರೆ. ೨೪-೩-೧೯೭೫ ರಲ್ಲಿ ೩ನೇ ಆಸ್ತಿಯ ಪಾರ್ಟಿಯಾದ ಶ್ರೀಯುತ ಎಂ. ಎಸ್. ಚಂದ್ರಶೇಖರಯ್ಯ ಭೂಪಮ್ಮ ಅವರು ಇದನ್ನು ಮಾರಿಬಿಟ್ಟಿದ್ದಾರೆ. ಇದನ್ನು ಯಾರು ಕೊಂಡುಕೊಂಡಿದ್ದಾರೆ ಅವರಿಗೆ ಕೊಟ್ಟುಬಿಡಿ ಎಂದೂ ಅವರ ಹತ್ತಿರ ದುಡ್ಡನ್ನೂ ಕಲೆಕ್ಟ್ ಮಾಡಬೇಡಿ ಎಂದು ಸ್ಪೆಸಿಫಿಕ್ ಆಗಿ ನೇಮ್ ಕೊಟ್ಟಿದ್ದಾರೆ. ನಮ್ಮ ಹತ್ತಿರ ಒಂದು ಲಕ್ಷ ಎಪ್ಪತ್ತಮೂರು ಸಾವಿರ ರೂಪಾಯಿಗಳನ್ನು ತೆಗೆದುಕೊಂಡು ಪುನಃ

ಬಿ.ಡಿ.ಎ ರವರು ಡಿಫರನ್ಸ್ ಆಫ್ ಅಮೌಂಟ್ ಕೊಡಬೇಕೆಂದು ಹೇಳಿ ಕಟ್ಟಿಸಿಕೊಂಡಿರುತ್ತಾರೆ. ಕಟ್ಟಿಸಿಕೊಂಡಮೇಲೆ ೧೫-೯-೧೯೬೨ ರಲ್ಲಿ ಕಮಿಷನರ್‌ರವರು ಅಪ್ರೂವ್‌ಮಾಡಿ ನಮಗೆ ಕೊಡ ಬೇಕೆಂದು ಆರ್ಡರ್ ಮಾಡಿದರು. ಸೆಕ್ರೆಟರಿಯವರೂ ಕೂಡ ಆರ್ಡರ್ ಮಾಡಿದರು. ನಾವುಗಳು ಜನರಿಗೆ ರೀಕನ್‌ವೇ ಮಾಡಿದರು, ಇನ್ನು ೫೫ಕ್ಕೆ ೨೦ ಜನರಿಗೆ ರೀಕನ್‌ವೇ ಮಾಡಬೇಕಾಗಿತ್ತು, ಆದನ್ನು ಮಾಡಲಿಲ್ಲ. ಇವತ್ತು ಏನುಮಾಡಿದರು ಎಂದರೆ ಒಂದು ಹೈಕೋರ್ಟ್ ಆಡ್ಡಿ ಇದೆ ಎಂದು ಹೇಳಿ ಪೊಜಿಷನ್ ಸರ್ಟಿಫಿಕೇಟ್ ಕೊಡುವುದಕ್ಕೆ ಆಗುವುದಿಲ್ಲವೆಂದು ಹೇಳುತ್ತಾರೆ. ಕೆಲವರಿಗೆ ಕೊಟ್ಟು ಇನ್ನು ೨೪ ಜನರಿಗೆ ಪೊಜಿಷನ್ ಸರ್ಟಿಫಿಕೇಟ್ ಕೊಡಲಿಲ್ಲವೆಂದರೆ ಡಿಸ್‌ಕ್ರಿಮಿನೇಟ್ ಮಾಡಿದಂತಾಗುವುದಿಲ್ಲವೇ? ಇದನ್ನು ಎಕ್ಸಾಮಿನ್ ಮಾಡಿ. ಲೀಗಲ್ ಆಫೀಸರ್‌ರವರೂ ಕೂಡ ತಪ್ಪು ಒಪೀನಿಯನ್ ಕೊಟ್ಟಿದ್ದಾರೆ. ಅವರ ಒಪೀನಿಯನ್ ತೆಗೆದುಕೊಂಡಮೇಲೆ ಕಮಿಷನರ್‌ರವರು ಅಪ್ರೂವ್ ಮಾಡಿ ಪೊಜಿಷನ್ ಕೊಡಬೇಕೆಂದು ಆರ್ಡರ್ ಮಾಡಿದ್ದಾರೆ. ೧೯೬೨ ರಲ್ಲಿ ಹೈಕೋರ್ಟ್ ಆರ್ಡರ್ ಇದೆ ಆದ್ದರಿಂದ ರೀಕನ್‌ವೇ ಮಾಡುವುದಕ್ಕಾಗುವುದಿಲ್ಲ. ರಿಜಿಸ್ಟರ್ ಆಗಿಲ್ಲವೆಂದು ಹೇಳುತ್ತಾರೆ. ಸೆಕ್ಷನ್ ೧೧-೧೦ ನನಗೆ ಮಾರ್ತೆಹೋಗಿದೆ. ಸಿ.ಪಿ.ಯಲ್ಲಿ ಕ್ಲಿಯರ್ ಆಗಿದೆ, ಆ ಪಾರ್ಟಿ ನನ್ನದಲ್ಲ ಆ ಸ್ವತ್ತು, ನಾವು ಮಾರಿದ್ದೇವೆ ಅವರಿಗೆ ಕೊಟ್ಟುಬಿಡಿ ಎಂದು ಒಪ್ಪಿಕೊಂಡಮೇಲೆ ಬಿ.ಡಿ.ಎ. ಎರಡು ಸಲ ದುಡ್ಡನ್ನು ವಸೂಲು ಮಾಡಿರುತ್ತಾರೆ. ವಸೂಲು ಮಾಡಿದಮೇಲೆ ಕೊಡುವುದಕ್ಕೆ ಏನು ಆಡ್ಡಿ ಎಂದು ಕೇಳುತ್ತೇನೆ.

ಅಧ್ಯಕ್ಷರು.—ಮಾನ್ಯ ವೆಂಕಟರಾಮಯ್ಯನವರೇ ನಿಮಗೆ ಕ್ವಶ್ಚನ್ ಅವರ್, ಕಾಲಿಂಗ್ ಅಟೆನ್‌ಷನ್, ಹಾಫ್ ಅನ್‌ಅವರ್ ಡಿಸ್‌ಕಷನ್, ಅಡ್ಜರ್ನ್‌ಮೆಂಟ್ ಮೋಷನ್ ಏನು ಎನ್ನುವುದು ಗೊತ್ತಿಲ್ಲವೆ? ಅದನ್ನೆಲ್ಲ ನಿಮಗೆ ಎಕ್ಸ್‌ಪ್ಲೈನ್ ಮಾಡಬೇಕೆ ಇದನ್ನು ಅರ್ಧ ಗಂಟೆ ಚರ್ಚೆಗೆ ತೆಗೆದುಕೊಳ್ಳೋಣವೇ.

ಶ್ರೀ ಎಂ. ಪಿ. ಪ್ರಕಾಶ್.— ಸನ್ಮಾನ್ಯ ಅಧ್ಯಕ್ಷರೇ ಪ್ರಾಯಶಃ ಸರ್ವೆ ನಂಬರ್ ೫೭/೨ ಆಗ್ರಹಾರದಾಸರಹಳ್ಳಿ ಗ್ರಾಮಕ್ಕೆ ಸಂಬಂಧಪಟ್ಟಂತೆ ಶ್ರೀಮತಿ ಭೂಪಮ್ಮನವರ ವ್ಯವಹಾರ ೧೯೬೩ರಿಂದ ನಡೆಯುತ್ತಿದೆ. ಆ ಸಂದರ್ಭದಲ್ಲಿ ಅವರು ಕಟ್ಟಬೇಕಾಗಿದ್ದಂಥ ಹಣವನ್ನು ಕಟ್ಟದಿದ್ದರಿಂದ ಮತ್ತೆ ಶ್ರೇಷ್ಠ ನ್ಯಾಯಾಲಯದಿಂದ ಬಂದಿರತಕ್ಕಂಥ ತೀರ್ಮಾನ, ಅದಕ್ಕೆ ಪೂರಕವಾಗಿ ಉಚ್ಚನ್ಯಾಯಾಲಯದಿಂದ ಬಂದಿರತಕ್ಕಂಥ ತೀರ್ಮಾನದ ಪ್ರಕಾರ ನಾವು ಮರಳಿ ಮಾಲೀಕರಿಗೆ ಕೊಡುವುದಕ್ಕೆ ಬರುವುದಿಲ್ಲ. ಯಾವಕಾರಣಕ್ಕಾಗಿ ನಿಲ್ಲಿಸಿದ್ದೇವೆಂದರೆ, ಯಾರಿಗೂ ಕೊಡಬಾರದೆಂಬ ಎನ್ನುವ ಕಾರಣಕ್ಕಾಗಿಯಲ್ಲ. ೧೯೬೨-೬೩ನೇ ಸಾಲಿನಲ್ಲಿ ಒಂದು ಲಕ್ಷ ರೂಪಾಯಿಗಳನ್ನು ಹೆಚ್ಚುವರಿ ಕೊಡಬೇಕಾಗಿತ್ತು. ಆ ಸಂದರ್ಭದಲ್ಲಿ ಅವರು ಕಟ್ಟಲಿಲ್ಲ. ಅವರು ಸೆಕ್ಷನ್ ೧೧ ಪಿ.ಸಿ.ಸಿ. ಹೇಳಿದರೂ ಅದಕ್ಕೂ ಇದಕ್ಕೂ ಏನೂ ಸಂಬಂಧವಿಲ್ಲ. ವಕೀಲರು ಎಷ್ಟರಮಟ್ಟಿಗೆ ಇರಂತ್ತಾರೆಂದರೆ ಟ್ರಾನ್ಸ್‌ಫರ್ ಆಫ್ ಪ್ರಾಪರ್ಟಿ ಆಕ್ಟ್ ಕೆಳಗೆ ಯಾವುದೇ ಒಂದು ವ್ಯವಹಾರವನ್ನು ಮಾಡತಕ್ಕಂಥ ಸಂದರ್ಭದಲ್ಲಿ ೫ ಪ್ರಾಪರ್ಟಿ ಒಂದು ನೂರಕ್ಕೂ ಹೆಚ್ಚು ಬೆಲೆಬಾಳತಕ್ಕಂಥದ್ದು ಇದ್ದರೆ ಅದನ್ನು ನೋಂದಾಯಿಸಿರಬೇಕೆಂಬ ನೂನಿ ಇರುವುದರಿಂದ Section 11 of the CPC is *for Res judicate*. As per the Transfer of Property Act, mere agreement of sale will not create a right, title and interest over the property. Therefore, the opinion of the Law Officer of the BDA will not sustain. We are unable to do anything in the matter. If he is aggrieved, let him approach the Supreme Court.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಸಚಿವರು ತಪ್ಪು ತಿಳಿದುಕೊಳ್ಳಬಾರದು. ಇದೇ ಜಾಗದಲ್ಲಿ ೨೯ರಲ್ಲಿ ಳಕ್ಕೆ ಸ್ವಾಧೀನದ ಹಕ್ಕು ಪತ್ರ ಕೊಟ್ಟರು, ೨೫ ಜನರಿಗೆ ಆಡ್ಡಿಯಾಯಿತು. ಆವರ ಹತ್ತಿರ ದುಡ್ಡು ವಸೂಲ್ಮಾಡಿಕೊಳ್ಳಿ ಇದು ನಮಗೆ ಸಂಬಂಧ ಇಲ್ಲವೆಂದರು. ಪುನಃ ಡಿಫರನ್ಸ್ ಅಮೌಂಟನ್ನು ಕಟ್ಟಿದೆವು. ಇನ್ನೂ ಏನಾದರೂ ಕೊಡಬೇಕೆಂದರೆ ಕೊಡುತ್ತೇವೆ. ಒಂದು ಲಕ್ಷದ ೭೪ ಸಾವಿರ ರೂಪಾಯಿಗಳನ್ನು ಕಟ್ಟಿದ್ದೇವೆ. ದಯವಿಟ್ಟು ೪ ಜನರಿಗೆ ಕೊಟ್ಟು ಬೇರೆಯವರಿಗೆ ಡಿಸ್ಕ್ರಿಮಿನೇಟ್ ಮಾಡುವುದರ ಬೇಡ. ಸೆಕ್ಷನ್ ೧೦ ಅಥವಾ ೧೧ರ ಪ್ರಕಾರ ಡಿಸ್ಕ್ರಿಮಿನೇಷನ್ ಮಾಡದೇ ರೀಕನ್ಸೀಡರ್ ಮಾಡಿ.

ಶ್ರೀ ಎಂ. ಪಿ. ಪ್ರಕಾಶ್.—ಸೈಟ್ ನಂ. ೨೧ ವರಲಕ್ಷ್ಮಿ ಪ್ರಕಾಶ್ ಅವರದ್ದು, ಸೈಟ್ ನಂ. ೧೩ ಕನಕಲತ ರೆಡ್ಡಿ ಅವರದ್ದು, ಸೈಟ್ ನಂ. ೧೮ ಅರುಣ ಕಲ್ಯಾಣ ಪೂರ ಅವರದ್ದು. ಅವರು ಕಟ್ಟಬೇಕಾದ ಹಣವನ್ನು ಕಟ್ಟಿದರು. ಆ ಮೂಲಕ ಅವರು ಸ್ವಾಧೀನದ ಹಕ್ಕು ಪತ್ರವನ್ನು ತೆಗೆದುಕೊಂಡರು. ಉಳಿದವರು ತೆಗೆದುಕೊಳ್ಳಲಿಲ್ಲ. ೧೯೮೨-೮೩ರಲ್ಲಿ ಇತರರು ಒಂದು ಲಕ್ಷ ರೂಪಾಯಿಗಳನ್ನು ಕಟ್ಟಬೇಕಾಗಿತ್ತು. ಅದನ್ನು ಅವರು ಕಟ್ಟಲಿಲ್ಲ. ಕಟ್ಟದೇ ಇದ್ದ ಸಂದರ್ಭದಲ್ಲಿ ಪ್ರಾಧಿಕಾರದಿಂದ ಮತ್ತೆ ತಿಳಿವಳಿಕೆ ಪತ್ರವನ್ನು ಕೊಡಲಾಯಿತು. ಕೊಟ್ಟರೂ ಅನಿವಾರ್ಯ ಕಾರಣದಿಂದ ಆರ್ಥಿಕ ಮುಗ್ಗಟ್ಟು ಇರಬಹುದು, ಅಥವಾ ಇನ್ನೇನೋ ಕಾರಣ ಇರಬಹುದು. ಈ ಸಂದರ್ಭಗಳ ನಡುವೆ ಶ್ರೇಷ್ಠ ನ್ಯಾಯಾಲಯದಿಂದ ಒಂದು ತೀರ್ಮಾನ ಬಂತು. ಯಾವುದಾದರೂ ಸಾರ್ವಜನಿಕ ಉದ್ದೇಶಕ್ಕೆ ಭೂಮಿಯನ್ನು ಸ್ವಾಧೀನ ತೆಗೆದುಕೊಂಡು ಅದರ ಮೂಲಕ ಎಲ್ಲಾ ಕಾರ್ಯಗಳನ್ನು ಪರಿಪೂರ್ಣವಾಗಿ ಮಾಡಿದ ನಂತರ ಅದನ್ನು ಮರಳಿ ಒಡೆಯರಿಗೆ ವಹಿಸಿಕೊಡತಕ್ಕದ್ದು, ಅದರಲ್ಲಿ ಸರ್ಕಾರಕ್ಕೆ ಅಧಿಕಾರ ಇಲ್ಲ ಎಂದು. ಆ ಕಾರಣಕ್ಕಾಗಿ ಅನಿವಾರ್ಯವಾಗಿ ಪೇಜಿಗೆ ಸಿಕ್ಕಿದ್ದೇವೆ. ಪಕ್ಷಪಾತ ಮಾಡುವುದಾಗಲಿ, ತೊಂದರೆ ಕೊಡಬೇಕೆಂಬ ಉದ್ದೇಶ ಪ್ರಾಧಿಕಾರಕ್ಕೆ ಇಲ್ಲ. ಡಿಸ್ಕ್ರಿಮಿನೇಷನ್ ಮಾಡಿದ್ದಾರೆಂಬುದು ಇದ್ದರೆ ಶ್ರೇಷ್ಠ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಬಹುದು. ಸಹಾನುಭೂತಿಯಿಂದ ಪರಿಶೀಲಿಸುವುದಕ್ಕೆ ಸಾಧ್ಯತೆ ಇದ್ದರೆ ಖಂಡಿತ ಸಹಾಯ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜನತಾ ಮನೆಗಳು.

೧೬೨೫. ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ವಸತಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೧೯೮೬-೮೭, ೧೯೮೭-೮೮ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಿರ್ಮಾಣ ಮಾಡಲಾಗಿರುವ ಜನತಾ ಹುಡ್ಕೋ ಗೃಹಗಳೆಷ್ಟು, (ತಾಲ್ಲೂಕುವಾರು ವಿವರ ನೀಡುವುದು).

ಆ) ಆ ಸಾಲಿನಲ್ಲಿ ಜನತಾ ಮನೆಗಳಿಗಾಗಿ ಹುಡ್ಕೋ ಮನೆಗಳಿಗಾಗಿ ಬಂದ ಅರ್ಜಿಗಳೆಷ್ಟು.

ಇ) ಅವುಗಳಲ್ಲಿ ಇತ್ಯರ್ಥವಾಗದೆ ಬಾಕಿ ಇರುವ ಅರ್ಜಿಗಳೆಷ್ಟು.

ಈ) ಆ ಪೈಕಿ ಪರಿಶಿಷ್ಟ ಜಾತಿ ಮತ್ತು ಜನಾಂಗದವರಿಗೆ ಸದರಿ ಯೋಜನೆಗಳಲ್ಲಿ ನೀಡಿರುವ ಗೃಹಗಳ ಸಂಖ್ಯೆಯೆಷ್ಟು?

ಶ್ರೀ ಮೊಹಮ್ಮದ್ ಮೊಯಿನುದ್ದೀನ (ವಸತಿ ರಾಜ್ಯ ಸಚಿವರು). —

ಅ) ೧೯೮೬-೮೭ ... ೧೮೮೩
೧೯೮೭-೮೮ ... ೧೧೭೬
ತಾಲ್ಲೂಕುವಾರು ಮಾಹಿತಿಯನ್ನು ಅನುಬಂಧದಲ್ಲಿ ಒದಗಿಸಿದೆ.

ಆ) ೧೯೮೬-೮೭ ... ೩೨೧೧
೧೯೮೭-೮೮ ... ೨೨೭೧

ಇ) ೧೪೫೮

ಈ) ೧೯೮೬-೮೭ ... ೩೯೬
೧೯೮೭-೮೮ ... ೪೫೦